(f) ವಾಕ್ಯದಮೇರೆಗೆ ಸರ್ಕಾರಿ ಉದ್ಯೋಗಸ್ಥರಲ್ಲದ ಸಭಿಕರು.

6. ಮಿ॥ ಲಿಂಗೇಗೌಡ.
7. ,, ಸಿಂಗರಿಗೌಡ.
8. ,, ಸಿದ್ದೆಗೌಡ.
9. ,, ಕೊಮಾರಿಗೌಡ.

(g) ವಾಕ್ಯದಮೇರೆಗೆ.

10. ಮಿ॥ ಬಾಬ್ಜಿ ಅಬ್ದುಲ್ ರಹಿಮಾನ್ ಬಾರ್ಜಾ.

(h) ವಾಕ್ಯಧಮೇರೆಗೆ.

11. ಮಿ॥ ಪೇಲ್ಟೋಟೆ ಇಂಡಸ್ಟ್ರಿಯಲ್ ಸ್ಕೂಲ್ ಯಾ ಕೈಗಾರಿಕೆ ಪಾಠಶಾಲೆಯ ಮಿ॥ ಎಂ. ಜೆ. ಶಾಮ್ಯಯ್ಯಂಗಾರ್.
12. ,, ಹಿರೋಡೆಯ ಮಿ॥ ಶ್ರೀಕಂಠಪಟ್ಟ.
13. ,, ತಿರುಮಲಸಮುದ್ರ ಜತ್ರದ ಮಿ॥ ಗುರುಕಾರ ಹುಚ್ಚಣ್ಣ.

ತಾರೀಖು 2ನೆ ಜೂ॥ 1907.

ನಂ. ಜಿ. 8131—ಜಿ. ಎಂ. 12-06—65, ಮಿ॥ ಮಿರ್ಜಾ ಮಹಮದ್ ಇಸ್ಮೈಲ್, ಬಿ. ಎ. ಯವರನ್ನೂ ಮತ್ತು ಮಿ॥ ಜಿ. ಬಿ. ಹೆಬ್ಬಿಕರ್, ಬಿ. ಎ., ಎಲ್. ಎಲ್. ಬಿ. ಯವರನ್ನು 1907ನೆ ಜೂ॥ 1ನೆ ತಾರೀಖು ಮೊದಲುಗೊಂಡು ಮೈಸೂರು ಸಿವಿಲ್ ಸರ್ವಿಸ್ಸಿಗೆ, ಬಿ. ಪಟ್ಟಯಲ್ಲಿ 5ನೆ ತರಗತಿಯ ಪ್ರೊಬೇಷನೆರಿ ಅಸಿಸ್ಟೆಂಟ್ ಕಮಿಷನರುಗಳಾಗಿ ನೇಮಕ ಮಾಡಿದೆ.

ತಾರೀಖು 27ನೆ ಜೂ॥ 1907.

ನಂ. ಜಿ. 8132—ಜಿ. ಎ. 12-06—66, ಪ್ರೊಬೇಷನೆರಿ ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮಿಷನರುಗಳಾದ ಮಿ॥ ಬಿ. ಭೀಮರಾವ್ ಮತ್ತು ಮಿ॥ ಎಂ. ಹಸನ್ ಅಲಿ ಯವರನ್ನು 1907ನೆ ಇಸವಿಯ ಜೂ॥ 1ನೆ ತಾರೀಖಿನಲ್ಲಿ ಲಾಗಾಯಿತು ಬಿ. ಪಟ್ಟಯಲ್ಲಿ 5ನೆ ತರಗತಿಯ ಅಸಿಸ್ಟೆಂಟ್ ಕಮಿಷನರನ್ನಾಗಿ ಮೈಸೂರು ಸಿವಿಲ್ ಸರ್ವಿಸ್ಸಿಗೆ ನೇಮಕ ಮಾಡಿದೆ.

ತಾರೀಖು 27ನೆ ಜೂ॥ 1907.

ನಂ. ಜಿ. 8152—ಜಿ. ಎಂ. 95-06-06, ಇಂಡಿಯಾ ಸರ್ಕಾರದ ಹೋಂ ಇಲಾಖೆಯ 1897ನೆ ಇಸವಿಯ ಮೇ 21ನೆ ತಾರೀಖಿನ 178ನೆ ನಂಬರಿನ ಇಸ್ತಿಹಾರ್ನಾಮೆಯಿಂದ ಪ್ರಕಟಿಸಲ್ಪಟ್ಟು 1900ನೆ ಇಸವಿಯ ಜುಲೈ 28ನೆ ತಾರೀಖಿನ 1400—ಮಿಸ್. ಫೈಲ್ 160-92ನೆ ನಂಬರಿನ ಇಸ್ತಿಹಾರ್ನಾಮೆಯಿಂದ ಮೈಸೂರು ಸಂಸ್ಥಾನಕ್ಕೆ ಲಗಾವಾಗುವಂತೆ ಮಾಡಲ್ಪಟ್ಟ ಎಕ್ಸ್ಪ್ಲೊಸಿವ್ಸ್ ಆಕ್ಟ್ ಯಾ ಕೈಸ್ತಮತಕ್ಕೆ ಸಂಬಂಧಪಟ್ಟ ನಿಬಂಧನೆಗಳ 4ನೆ ಭಾಗದ 29ನೆ ನಿಬಂಧನೆಗೆ ಒಂದು ಭಾಗವನ್ನು ಹೆಚ್ಚಾಗಿ ಸೇರಿಸುವಂತೆ ಹುಕುಂ ಮಾಡುವ 1907ನೆ ಇಸವಿಯ ಮೇ 13ನೆ ತಾರೀಖಿನ 211ನೆ ನಂಬರಿನ ಇಂಡಿಯಾ ಸರ್ಕಾರದ ಹೋಂ ಇಲಾಖೆ (ಎಕ್ಸಿಸಿಯಾಸ್ಟಿಕಲ್) ಯಿಂದ ಕೊಡಲ್ಪಟ್ಟ ಇದಡಿ ಕಂಡ ಇಸ್ತಿಹಾರ್ನಾಮೆಯನ್ನು ಸಮಸ್ತರ ತಿಳಿವಳಿಕೆಯ ಬಗ್ಗೂ ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಅನುಸರಿಸುವ ಬಗ್ಗೂ ಪ್ರಕಟಿಸಿದೆ :—

1897ನೆ ಇಸವಿಯ ಮೇ 21ನೆ ತಾರೀಖಿನ 178ನೆ ನಂಬರಿನ ಹೋಂ ಇಲಾಖೆಯ ಇಸ್ತಿಹಾರ್ನಾಮೆಯಲ್ಲಿ ಪ್ರಕಟಿಸಲ್ಪಟ್ಟ ಕೈಸ್ತಮತ ಸಂಬಂಧವಾದ ನಿಬಂಧನೆಗಳ 4ನೆ ಭಾಗದ 29ನೆ ನಿಬಂಧನೆಗೆ ಇದರಡಿ ಕಂಡ ಭಾಗವನ್ನು ಸೇರಿಸಿದೆ :—

ಅಂಥಾ ಹುಂಡು ಇಲ್ಲದ ಸ್ಥಳದಲ್ಲಿ ಗಡಿಯಾರಗಳನ್ನು ಇಡುವ ಬಜಾರನ್ನು ಸರ್ಕಾರದವರು ವಹಿಸತಕ್ಕದ್ದು.

ತಾರೀಖು 29ನೆ ಜೂ॥ 1907.

ನಂ. 12316—ಎಲ್. ಬಿ. 48-06—3, ಸ್ರ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನು ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಚನ್ನಪಟ್ಟಣ ತಾಲ್ಲೂಕಿನಲ್ಲಿರುವ ಅಕ್ಕೂರು ಗ್ರಾಮವನ್ನು ವಿಸ್ತರಿಸುವುದಕ್ಕೆ ಅವಶ್ಯಕವಾಗಿದೆ ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 8 (c) ಪ್ರಕರಣಗಳನ್ನು ಅನುಸರಿಸಿ ಕೋಲಾರ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಮಾಡಿಕೊಡಲು ಅಧಿಕಾರ ಕೊಟ್ಟಿದೆ.

ತಿಪ್ಪುಕೆಲ್ಲ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು.	ಸರ್ವೆ ನಂಬರು.	ಖುಷ್ಕಿ, ತರಿ ಯಾ ಬಾಗಾಯಿತ.	ಒಟ್ಟು ವಿಸ್ತೀರ್ಣ.	ಇದಾಯ.	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.		ಚತುರ್ಗಡಿ.			
									ವಿಸ್ತೀರ್ಣ.	ಕುಂದಾಯ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ಚನ್ನಪಟ್ಟಣ	ಬಿರೂಪಾಕ್ಷಿಪುರ	ಅಕ್ಕೂರು	ವೀರಣ್ಣ	217	ಖುಷ್ಕಿ	ಎ. ಗು. 4 38 ರೂ. 4	ರೂ.	ಎ. ಗು. 4 38	ರೂ.	ಹೊಸಹಳ್ಳಿಗೆ ಹೋಗುವ ಬಂಡಿದಾರಿಯ ಪೂರ್ವ ಪಕ್ಕ.	ಸರ್ವೆ 214ನೆ ನಂಬರಿನ ಹೊಲ.	ಸರ್ವೆ 214ನೆ ನಂಬರು (ಮಂದು ಹಳ್ಳ)	ಅಕ್ಕೂರು ಗ್ರಾಮ ನಿಶೋಧನ